# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: "ನ್ಯಾಷನಲ್ ಸೋಲಾರ್ ಮಿಷನ್" ಕಾರ್ಯಕ್ರಮದಡಿಯಲ್ಲಿ ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ (SECI) ಮುಖಾಂತರ ಫೇಸ್-2, ಬ್ಯಾಚ್-3ರಲ್ಲಿ ರಾಜ್ಯಕ್ಕೆ ಬರುವ ಸೌರ ವಿದ್ಯುತ್‌ನ್ನು ರಾಜ್ಯದ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:

1. ಜಂಟಿ ಕಾರ್ಯದರ್ಶಿಗಳು, ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ, ಭಾರತ ಸರ್ಕಾರ ರವರ ಪತ್ರ ಸಂಖ್ಯೆ: 32/2/2014-15/GSP ದಿನಾಂಕ: 28.12.2015.
2. ರಾಜ್ಯ ಸರ್ಕಾರದ ಪತ್ರ ಸಂಖ್ಯೆ:ಇಎನ್ 10 ವಿಎಸ್‌ಸಿ 2016 ದಿನಾಂಕ:02.01.2016.
3. ವ್ಯವಸ್ಥಾಪಕ ನಿರ್ದೇಶಕರು, SECI ರವರ ಪತ್ರ ಸಂಖ್ಯೆ : SECI/2000 MW/Karnataka/ 2016/5818 ದಿನಾಂಕ:15.01.2016

********

ಪ್ರಸ್ತಾವನೆ:

ಕೇಂದ್ರ ಸರ್ಕಾರದ "ನ್ಯಾಷನಲ್ ಸೋಲಾರ್ ಮಿಷನ್" ಕಾರ್ಯಕ್ರಮದಡಿಯಲ್ಲಿ ಮೇಲೆ ಓದಲಾದ(1)ರಂತೆ ನ್ಯಾಷನಲ್ ಸೋಲಾರ್ ಮಿಷನ್ ಫೇಸ್-2, ಬ್ಯಾಚ್-3 State Specific VGF(Viability Gap Funding) Scheme ಕಾರ್ಯಕ್ರಮದಲ್ಲಿ SECI ಯಿಂದ ಸೌರ ವಿದ್ಯುತ್ತನ್ನು ರಾಜ್ಯಕ್ಕೆ ಹಂಚಿಕೆ ಮಾಡುವ ಕುರಿತು ಜಂಟಿ ಕಾರ್ಯದರ್ಶಿಗಳು, ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ, ಭಾರತ ಸರ್ಕಾರರವರು ಪ್ರಸ್ತಾಪಿಸಿದ್ದು, ಈ ಯೋಜನೆಯಡಿ ವಿದ್ಯುತ್‌ನ್ನು ರಾಜ್ಯಕ್ಕೆ ಹಂಚಿಕೆ ಮಾಡಲು ಸಹಮತಿ ನೀಡುವಂತೆ ತಿಳಿಸಿರುತ್ತಾರೆ. ವಿದ್ಯುತ್ ವಿತರಣಾ ಕಂಪನಿಗಳೊಂದಿಗೆ 25 ವರ್ಷಕ್ಕೆ ವಿದ್ಯುತ್ ಮಾರಾಟ ಒಪ್ಪಂದವನ್ನು ಮಾಡಿಕೊಂಡು ವಿದ್ಯುತ್‌ನ್ನು ನೀಡಲಾಗುವುದು ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಕೇಂದ್ರ ಸರ್ಕಾರಕ್ಕೆ ನ್ಯಾಷನಲ್ ಸೋಲಾರ್ ಮಿಷನ್ ಫೇಸ್-2, ಬ್ಯಾಚ್-3 State Specific VGF(Viability Gap Funding) Scheme ಕಾರ್ಯಕ್ರಮದಲ್ಲಿ ರಾಜ್ಯಕ್ಕೆ 1000 ಮೆ.ವ್ಯಾ. ಸೌರ ವಿದ್ಯುತ್‌ನ್ನು ಹಂಚುವಂತೆ ಕೋರಲಾಗಿರುತ್ತದೆ. ಪ್ರಸ್ತುತ, ಮೇಲೆ ಓದಲಾದ(3)ರಂತೆ ವ್ಯವಸ್ಥಾಪಕ ನಿರ್ದೇಶಕರು, SECI ರವರು ರಾಜ್ಯದಲ್ಲಿ ನ್ಯಾಷನಲ್ ಸೋಲಾರ್ ಮಿಷನ್ ಫೇಸ್-2, ಬ್ಯಾಚ್-3 State Specific VGF Scheme ಕಾರ್ಯಕ್ರಮದಲ್ಲಿ 1000 ಮೆ.ವ್ಯಾ ಸೌರ ವಿದ್ಯುತ್ತನ್ನು ನೀಡುವ ಸಂಬಂಧ ರಾಜ್ಯದ ವಿವಿಧೆಡೆ 1000 ಮೆ.ವ್ಯಾ. (900ಮೆ.ವ್ಯಾ.-NDCR & 100ಮೆ.ವ್ಯಾ.-DCR) ಸಾಮರ್ಥ್ಯಕ್ಕೆ ಸೌರ ಯೋಜನೆಗಳನ್ನು ಅನುಷ್ಠಾನಗೊಳಿಸಲು ಟೆಂಡರ್ ಕರೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

MD KREDL

GM (Tech) KREDL

ಈ ವಿದ್ಯುತ್ ಸಾಮರ್ಥ್ಯವನ್ನು ರಾಜ್ಯದ ವಿದ್ಯುತ್ ವಿತರಣಾ ಕಂಪನಿಗಳಿಗೆ ಮರು ಹಂಚಿಕೆ ಮಾಡುವ ಅವಶ್ಯಕತೆ ಇರುವುದರಿಂದ ಹಾಗೂ ವಿದ್ಯುತ್ ವಿತರಣಾ ಕಂಪನಿಗಳು SECI ರವರೊಂದಿಗೆ ಮುಂದಿನ ಕ್ರಮವಹಿಸಲು ಅನುವು ಮಾಡಿಕೊಡಲು ಉದ್ದೇಶಿಸಿದೆ.

ನ್ಯಾಷನಲ್ ಸೋಲಾರ್ ಮಿಷನ್ ಫೇಸ್-2, ಬ್ಯಾಚ್-3 State Specific VGF Scheme ಕಾರ್ಯಕ್ರಮದಲ್ಲಿ ರಾಜ್ಯಕ್ಕೆ SECI ಯಿಂದ ಬರುವ 1000 ಮೆ.ವ್ಯಾ ಸೌರ ವಿದ್ಯುತ್ ಸಾಮರ್ಥ್ಯವನ್ನು ಸರ್ಕಾರದ ಆದೇಶ ಸಂಖ್ಯೆ: ಇಎನ್ 57 ವಿಎಸ್‌ಸಿ 2015 ದಿನಾಂಕ: 31.03.2016ರಂತೆ ರಾಜ್ಯದ ವಿವಿಧ ಮೂಲಗಳಿಂದ ದೊರಕುವ ವಿದ್ಯುತ್ ಶೇಕಡವಾರು ಪ್ರಮಾಣದಲ್ಲಿ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಿಕೆಯಾಗಿರುವ ಅನುಪಾತದಲ್ಲಿ, ಎಲ್ಲಾ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಲು ಉದ್ದೇಶಿಸಿದೆ. ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಈ ಕೆಳಗಿನ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 10 ವಿಎಸ್‌ಸಿ 2016,**

**ಬೆಂಗಳೂರು, ದಿನಾಂಕ: 30.06.2016.**

ನ್ಯಾಷನಲ್ ಸೋಲಾರ್ ಮಿಷನ್ ಫೇಸ್-2, ಬ್ಯಾಚ್-3 State Specific VGF Scheme ಕಾರ್ಯಕ್ರಮದಲ್ಲಿ ರಾಜ್ಯಕ್ಕೆ ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ (SECI) ಯಿಂದ ಸರಬರಾಜಾಗುವ 1000 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್‌ನ್ನು ಈ ಕೆಳಕಂಡ ಅನುಪಾತದಂತೆ ವಿದ್ಯುತ್ ವಿತರಣಾ ಕಂಪನಿಗಳಿಗೆ ಹಂಚಿಕೆ ಮಾಡಿ ಆದೇಶಿಸಿದೆ:

| **ವಿತರಣಾ ಕಂಪನಿ** | **ಶೇಕಡವಾರು ವಿದ್ಯುತ್ ಹಂಚಿಕೆ ಪ್ರಮಾಣ** | **ಸೌರ ವಿದ್ಯುತ್ ಸಾಮರ್ಥ್ಯ (ಮೆ.ವ್ಯಾನಲ್ಲಿ)** |
|---|---|---|
| ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | 47.78% | 477.8 |
| ಮಂಗಳೂರು ವಿದ್ಯುತ್ ಸರಬರಾಜು ಕಂಪನಿ | 8.02% | 80.2 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | 19.46% | 194.6 |
| ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ | 13.68% | 136.8 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | 11.06% | 110.6 |
| **ಒಟ್ಟಾರೆ** | 100% | 1000 |

**ನಿಬಂಧನೆಗಳು:**

1. ಈ ಆದೇಶವು ನ್ಯಾಷನಲ್ ಸೋಲಾರ್ ಮಿಷನ್ ರ ಫೇಸ್-2, ಬ್ಯಾಚ್-3 State Specific VGF Scheme ಕಾರ್ಯಕ್ರಮದಲ್ಲಿ ರಾಜ್ಯಕ್ಕೆ ವಿದ್ಯುತ್ ಸರಬರಾಜಾಗುವ ದಿನಾಂಕದಿಂದ ಮುಂದಿನ ಆದೇಶದವರೆಗೂ ಜಾರಿಯಲ್ಲಿರುತ್ತದೆ.
2. ಈ ಶೇಕಡಾವಾರು ವಿದ್ಯುತ್ ಹಂಚಿಕೆ ಪ್ರಮಾಣವು ಕೇಂದ್ರ ಸರ್ಕಾರದ SECI ಯಿಂದ ಸರಬರಾಜಾಗುವ ವಿದ್ಯುತ್ ಪ್ರಮಾಣಕ್ಕೆ ಮಾತ್ರ ಅನ್ವಯಿಸುತ್ತದೆ.

3. ವಿದ್ಯುತ್ ವಿತರಣಾ ಕಂಪನಿಗಳು SECI ರವರೊಂದಿಗೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳುವುದು.
4. ಈ ಆದೇಶದಂತೆ ವಿತರಣಾ ಕಂಪನಿವಾರು ಹಂಚಿಕೆ ಮಾಡಲಾದ ವಿದ್ಯುತ್ ಪ್ರಮಾಣವನ್ನು ತಪ್ಪದೇ ಪಾಲಿಸುವುದು ಮತ್ತು ಈ ಹಂಚಿಕೆಯು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.
5. ಈ ಆದೇಶದ ನಿಬಂಧನೆಗಳನ್ನು ಮಾರ್ಪಡಿಸುವ ಅಧಿಕಾರ ಸರ್ಕಾರ ಹೊಂದಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ಎ.ಚಪ್ಪರಬಂದ್)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ.

ಪ್ರತಿಗಳು:-

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಕ್ತಿ ಭವನ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು-560001.
4. ವ್ಯವಸ್ಥಾಪಕ ನಿರ್ದೇಶಕರು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಕಾವೇರಿ ಭವನ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಚೆಸ್ಕಾಂ/ಹೆಸ್ಕಾಂ/ಸೆಸ್ಕ್.
6. ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಎಂ.ಜಿ. ರಸ್ತೆ ಬೆಂಗಳೂರು.
7. ಮಾನ್ಯ ಇಂಧನ ಸಚಿವರ ವಿಶೇಷಾಧಿಕಾರಿಗಳು/ ಆಪ್ತಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ವಿಶೇಷಾಧಿಕಾರಿ (ಸುಧಾರಣೆ) /ಕಾರ್ಯಪಾಲಕ ಅಭಿಯಂತರರು (ಯೋಜನೆ/ಇ.ಎಂ.ಸಿ-1, 2 &3), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
12. ಶಾಖಾ ರಕ್ಷಾ ಕಡತ/ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.